**<u>ಸಾಕ್ಷಿಯನ್ನು ದಿನಾಂಕ 02-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ 1 ರಿಂದ 4 ಮತ್ತು 13 ರಿಂದ 16 ಪ್ರತಿವಾದಿಯರ ಪರ ಶ್ರೀ ಜಿ.ವೈ ವಕೀಲರಿಂದಃ</u>**

1. ಈ ದಾವೆ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ವಾದ ಪತ್ರ ಮತ್ತು ಪ್ರಮಾಣ ಪತ್ರ ಬರೆಸಲು ನಾನೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯಲ್ಲಿ ಒಟ್ಟು ಎಷ್ಟು ಆಸ್ತಿಗಳಲ್ಲಿ ನೀವು ಪಾಲು ಕೇಳಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಒಂದು ಆಸ್ತಿಯಲ್ಲಿ ಕೇಳಿದ್ದೀನಿ ಎನ್ನುತ್ತಾರೆ. ಯಾವ ಒಂದು ಆಸ್ತಿ ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ನಂಬರ್ 2 ರಲ್ಲಿರುವ 2 ಎಕರೆ 13 ಗುಂಟೆ ಎನ್ನುತ್ತಾರೆ. ಬೇರೆ ಯಾವುದೇ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಮತ್ತು ಪಾಲು ಕೇಳುತ್ತಿಲ್ಲ.

2. ಈ ದಾವೆ ಸಲ್ಲಿಸುವಾಗ ಸರ್ವೆ ನಂಬರ್ 2 ರಲ್ಲಿದೆ ಎಂದು ನಾನು ಹೇಳುತ್ತಿರುವ 2 ಎಕರೆ 13 ಗುಂಟೆ ಜಮೀನು ಯಾರ ಹೆಸರಿಗೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ 1 ಮತ್ತು 8 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಮಾಡಿಕೊಂಡಿದ್ದರು ಎನ್ನುತ್ತಾರೆ.ಅದಕ್ಕೂ ಮೊದಲು ಸದರಿ ಸ್ವತ್ತಿನ ಖಾತೆ–ಪಹಣಿ ದಾಖಲೆಗಳು ನನ್ನ ದೊಡ್ಡಮ್ಮ ನಾಗಮ್ಮ ಕೋಂ ನಂದಯ್ಯಪ್ಪ ರವರ ಹೆಸರಿಗೆ ಇತ್ತು. ನಂಧ್ಯಪ್ಪ ತೀರಿಕೊಂಡ ನಂತರ ನಾಗಮ್ಮನ ಹೆಸರಿಗೆ ಸದರಿ ಜಮೀನಿನ ದಾಖಲೆಗಳು ಬದಲಾಗಿತ್ತು. ನಂಧ್ಯಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ.

ಮೊದಲನೇ ಹೆಂಡತಿ ಗೌರಮ್ಮ ಮತ್ತು 2 ನೇ ಹೆಂಡತಿ ನಾಗಮ್ಮ ಎಂದರೆ ಸರಿ. ನಂದಯ್ಯಪ್ಪನಿಗೆ ನನ್ನ ತಂದೆ ಬಸ್ಸಪ್ಪ ಸಹೋದರನಾಗಬೇಕು ಎಂದರೆ ಸರಿ. ನಂಧ್ಯಪ್ಪ ಮತ್ತು ಗೌರಮ್ಮನಿಗೆ ನಂಧ್ಯಪ್ಪ ಎಂಬ ಹೆಸರಿನ ಮಗನಿದ್ದ ಎಂದರೆ ಸರಿ. ಸದರಿ ನಂಧ್ಯಪ್ಪ ಬಿನ್ ನಂಧ್ಯಪ್ಪನಿಗೆ 1 ರಿಂದ 4 ನೇ ಪ್ರತಿವಾದಿಯರು ಮಕ್ಕಳಾಗಬೇಕು ಎಂದರೆ ಸರಿ. ನಂಧ್ಯಪ್ಪ 2 ನೇ ಹೆಂಡತಿ ನಾಗಮ್ಮಳಿಗೆ ಒಟ್ಟು 7 ಜನ ಮಕ್ಕಳಿದ್ದು ಅವರು ಈ ದಾವೆಯ 5 ರಿಂದ 11 ನೇ ಪ್ರತಿವಾದಿಯರು ಎಂದರೆ ಸರಿ.

3. ನನ್ನ ತಾಯಿಯ ಹೆಸರು ನಂಧ್ಯಮ್ಮ ಎಂದರೆ ಸರಿ. 2 ನೇ ವಾದಿ ನನ್ನ ಅಕ್ಕ ಎಂದರೆ ಸರಿ.

4. ವಾದಿ–ಪ್ರತಿವಾದಿಯರ ಒಟ್ಟು ಕುಟುಂಬದ 1997 ರಲ್ಲಿ ಪಾಲು ವಿಭಾಗ ಆಗಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಕೊಟ್ಟಿದ್ದೇನೆ. 1997 ರಲ್ಲಿ ಆಗಿರುವ ಪಾಲು ವಿಭಾಗ ನೊಂದಣಿ ಆಗಿತ್ತು. ಸದರಿ ನೊಂದಾಯಿತ ಪಾಲು ವಿಭಾಗ ಪತ್ರದಲ್ಲಿ ಒಟ್ಟು ಎಷ್ಟು ಜನ ಪಕ್ಷಗಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಲ್ಲಿ ಯಾವ ಯಾವ ಜಮೀನುಗಳನ್ನು ವಿಭಾಗ ಮಾಡಿಕೊಳ್ಳಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಯಾರ್ಯಾರು ಸದರಿ ದಾಖಲೆಗೆ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ನಾನು ಸಹಿ ಮಾಡಿದ್ದೇನೆ, ಬೇರೆ ಯಾರು ಸಹಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪಾಲು ವಿಭಾಗ ಪತ್ರ ನೊಂದಣಿಯಾಗುವಾಗ ನನಗೆ ಸುಮಾರು 17–18 ವರ್ಷ ವಯಸ್ಸಾಗಿತ್ತು. ನೊಂದಣಿ ಕಚೇರಿಗೆ ನಿಮ್ಮನ್ನು ಯಾರು ಕರೆದುಕೊಂಡು

ಹೋಗಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಅಕ್ಕ 2ನೇ ವಾದಿ ಮತ್ತು ನನ್ನ ತಾಯಿ ಕರೆದುಕೊಂಡು ಹೋಗಿದ್ದರು ಎನ್ನುತ್ತಾರೆ. ನಾವು 3 ಜನ ಸದರಿ ದಾಖಲೆ ಸಹಿ ಮಾಡಿದ್ದೇವೆ ಎಂದರೆ ಸರಿ. ಸದರಿ ನೊಂದಾಯಿತ ಪಾಲು ವಿಭಾಗದಲ್ಲಿ ನನ್ನ ತಾಯಿ, ಅಕ್ಕ ಮತ್ತು ನನ್ನ ಪಾಲಿಗೆ ಒಡೆಯರಪುರ ಸರ್ವೆ ನಂಬರ್ 7 ರಲ್ಲಿ 4 ಎಕರೆ 10 ಗುಂಟೆ ಜಮೀನು ಕೊಡಲಾಗಿತ್ತು.

5. ನನಗೆ ಓದಲು-ಬರೆಯಲು ಬರುತ್ತದೆ. ಈ ದಾವೆಯಲ್ಲಿ ಸಲ್ಲಿಸಲಾದ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರಗಳನ್ನು ಓದಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಕಳೆದ 20-25 ವರ್ಷದಿಂದ ಮ್ಯಾಕ್ಯಾನಿಕ್ ಕೆಲಸ ಮಾಡುತ್ತೇನೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

6. ದಾವಾ ಐಟಂ ನಂಬರ್ 1 ರ ಪಹಣಿ ದಾಖಲೆಗಳು 2018 ಕ್ಕೂ ಹಿಂದೆ ನನ್ನ ದೊಡ್ಡಮ್ಮ ನಾಗಮ್ಮ ಕೋಂ ನಂಧ್ಯಪ್ಪ ರವರ ಹೆಸರಿಗೆ ಇತ್ತು. ನನ್ನ ದೊಡ್ಡಪ್ಪ ಯಾವಾಗ ತೀರಿಕೊಂಡರು ಎಂದು ನಿಖರವಾದ ದಿನಾಂಕ ನನಗೆ ನೆನಪಿಲ್ಲ. ನಂಧ್ಯಪ್ಪನ ನಂತರ ದಾವಾ ಐಟಂ ನಂಬರ್ 1 ರ ಪಹಣಿ ನಾಗಮ್ಮನ ಹೆಸರಿಗೆ ಬದಲಾವಣೆಯಾಗಿ 2018 ರವರೆಗೂ ಆಕೆಯ ಹೆಸರಿನಲ್ಲೇ ಇತ್ತು ಮತ್ತು ಆ ನಂತರ ಪ್ರತಿವಾದಿಯರು ನಮಗೆ ಗೊತ್ತಾಗದಂತೆ 1 ಮತ್ತು 8 ನೇ ಪ್ರತಿವಾದಿಯರ ಹೆಸರಿಗೆ ಬದಲಾವಣೆ ಮಾಡಿದ್ದಾರೆ ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ. ಆ ಸಂಬಂಧ ಪಹಣಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ ಯಾವುದೇ

ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ವಕೀಲರ ಬಳಿ ಕೊಟ್ಟಿದ್ದೇನೆ ಎನ್ನುತ್ತಾರೆ. ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಐಟಂ ನಂಬರ್ 1 ರ ಪಹಣಿ 2012–13 ನೇ ಸಾಲಿನಲ್ಲಿ ತಹಶೀಲ್ದಾರ್ ರವರ ಆದೇಶದ ಮೇರೆಗೆ 1 ಮತ್ತು 8 ನೇ ಪ್ರತಿವಾದಿಯರ ಹೆಸರಿಗೆ ಜಂಟಿಯಾಗಿದೆ ಎಂದರೆ ಸಾಕ್ಷಿ ಸದರಿ ವಿಷಯ ನಮಗೆ 2018–19 ರಲ್ಲಿ ಗೊತ್ತಾಯಿತು ಎನ್ನುತ್ತಾರೆ.

8. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಈಗ ನನಗೆ ತೋರಿಸಲಾದ ದಾಖಲೆಯಲ್ಲಿ ನನ್ನ ಹಾಗೂ ನನ್ನ ಅಕ್ಕ 2 ನೇ ವಾದಿಯ ಸಹಿಗಳು ಮತ್ತು ನನ್ನ ತಾಯಿ ನಂಢ್ಯಮ್ಮರವರ ಹೆಬ್ಬೆಟ್ಟಿನ ಗುರುತುಗಳು ಇದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆ ದಿನಾಂಕ 13.051997 ರಂದು ನೊಂದಾಯಿಸಲಾದ ಮತ್ತು ದಿನಾಂಕ 15.04.1997 ರಂದು ತಯಾರಿಸಲಾದ ನೊಂದಾಯಿತ ಪಾಲು ವಿಭಾಗ ಪತ್ರವಾಗಿದ್ದು, ಅದನ್ನು ಈಗ **ನಿಡಿ–1** ಎಂದು ಗುರುತಿಸಲಾಯಿತು. ಸಾಕ್ಷಿ ತನ್ನದು ಮತ್ತು 2 ನೇ ವಾದಿಯದ್ದು ಎಂದು ಗುರುತಿಸಿದ ತಲಾ 7 ಸಹಿಗಳನ್ನು ಈಗ **ನಿಡಿ–1(ಎ) ರಿಂದ 1(ಎನ್)** ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ತಾಯಿ ನಂಢ್ಯಮ್ಮರವರದ್ದು ಎಂದು ಗುರುತಿಸಿದ 6 ಹೆಬ್ಬೆಟ್ಟಿನ ಗುರುತುಗಳನ್ನು **ನಿಡಿ–1(ಓ) ರಿಂದ (ಟಿ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ ದೊಡ್ಡಮ್ಮ ನಾಗಮ್ಮರವರ ಹೆಬ್ಬೆಟ್ಟಿನ ಗುರುತು ಇದೆ ಮತ್ತು 1 ನೇ ಪ್ರತಿವಾದಿಯ ನಂಢ್ಯಪ್ಪ, 8 ನೇ ಪ್ರತಿವಾದಿಯ ಮತ್ತು 10 ನೇ ಪ್ರತಿವಾದಿಯ ಸಹಿ ಇದೆ

ಎಂದರೆ ಸರಿ.

9. ನಿಡಿ-1 ರ ಪತ್ರದ ನೊಂದಾಯಿತ ಪತ್ರದ ಮೂಲಕ ನಮ್ಮ ಒಟ್ಟು ಕುಟುಂಬದದ ಎಲ್ಲಾ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಸದರಿ ದಾಖಲೆಗೆ ನಾನು ಮತ್ತಿತರ ಪಕ್ಷಗಾರರೆಲ್ಲರೂ ಉಪ-ವಿಭಾಗಾಧಿಕಾರಿಗಳ ಕಚೇರಿಯಲ್ಲಿ ಸಹಿ ಮಾಡಿದ್ದೇವು ಎಂದರೆ ಸರಿ.

10. ನಿ.ಡಿ-1 ರ ನೊಂದಾಯಿತ ಪಾಲು ವಿಭಾಗ ಪತ್ರದಲ್ಲಿ ಈ ದಾವೆಯ ಐಟಂ ನಂಬರ್ 1 ಸ್ವತ್ತು ನನ್ನ ದೊಡ್ಡಮ್ಮ ನಾಗಮ್ಮ ಕೋಂ ನಂಧ್ಯಪ್ಪ ರವರಿಗೆ ಬಂದಿತ್ತು ಎಂದರೆ ಸರಿ. ಸದರಿ ಸ್ವತ್ತನ್ನು ನಿಡಿ-1 ರ ದಾಖಲೆಯಲ್ಲಿ ಷೆಡ್ಯೂಲ್ 1 ಎಂದು ತೋರಿಸಲಾಗಿದೆ ಎಂದರೆ ಸರಿ. ಸಾಕ್ಷಿ ಸ್ವ ಇಚ್ಚೆಯಿಂದ ಪಾಲು ವಿಭಾಗ ನೊಂದಣಿ ಆಗುವ ಮೊದಲು ಊರಿನಲ್ಲಿ ನಡೆದ ಪಂಚಾಯತಿಯಲ್ಲಿ ನನ್ನ ತಾಯಿಗೆ ಕೈ ಕಾಲು ಇಲ್ಲದ ಕಾರಣ ಹಾಗೂ ಬ್ಯಾಂಕಿಗೆ ಸಾಲ ಪಡೆಯಲು ಓಡಾಡಲು ಸಾಧ್ಯವಿಲ್ಲದ ಕಾರಣ ದಾವಾ ಐಟಂ ನಂಬರ್ 1 ರ ಸ್ವತ್ತನ್ನು ನನ್ನ ದೊಡ್ಡಮ್ಮ ನಾಗಮ್ಮನ ಹೆಸರಿಗೆ ಕೊಡಲಾಗಿದೆ ಎಂದು ಪಾಲು ವಿಭಾಗದಲ್ಲಿ ಬರಸಬೇಕೆಂದು ತೀರ್ಮಾನ ಆಯಿತು ಹಾಗಾಗಿ ಸದರಿ ನಿಬಂಧನೆಗೆ ನಾನು ಒಪ್ಪಿಕೊಂಡೆ ಎನ್ನುತ್ತಾರೆ. ಸದರಿ ವಿಷಯವನ್ನು ನಿಡಿ-1 ರ ದಾಖಲೆಯಲ್ಲಿ ಬರೆದಿದೆ. ಸಾಕ್ಷಿ ಪುನಃ ನಿಡಿ-1 ರ ದಾಖಲೆ ನೊಂದಣಿಯಾದ 2 ತಿಂಗಳ ನಂತರ ನನಗೆ ಅದರ ಪ್ರತಿ ದೊರೆಯಿತು ಎನ್ನುತ್ತಾರೆ. ಸಾಕ್ಷಿ ಪುನಃ ದಾವಾ ಐಟಂ ನಂಬರ್ 1 ರ ಸ್ವತ್ತನ್ನು ಯಾರು ಉಳುಮೆ ಮಾಡಲಿಲ್ಲ ಮತ್ತು ಪಾಲು

ವಿಭಾಗದ ನಂತರ ಅದನ್ನು ಬೀಳು ಬಿಡಲಾಯಿತು ಎನ್ನುತ್ತಾರೆ.

11. ನಿಡಿ–1 ರ ದಾಖಲೆಯ ಪ್ರಕಾರ ದಾವಾ ಐಟಂ ನಂಬರ್ 1 ರ ಸ್ವತ್ತಿನ ಖಾತೆ ನಾಗಮ್ಮ ರವರ ಹೆಸರಿಗೆ ಬದಲಾವಣೆಯಾಗಿತ್ತು ಎಂದರೆ ಸರಿ.

12. ನಿಡಿ–1 ರ ದಾಖಲೆಯ ಷೆಡ್ಯೂಲ್ 2 ರಲ್ಲಿ ತೋರಿಸಿರುವ ಮತ್ತು ಈಗ ನೀವು ನನಗೆ ಓದಿ ಹೇಳಿದ ಸ್ವತ್ತುಗಳು 8 ನೇ ಪ್ರತಿವಾದಿಗೆ ಕೊಡಲಾಗಿದೆ ಎಂದರೆ ಸರಿ. ನಿಡಿ–1 ರ ದಾಖಲೆಯ ಷೆಡ್ಯೂಲ್ 3 ರಲ್ಲಿ ತೋರಿಸಿರುವ ಮತ್ತು ಈಗ ನೀವು ನನಗೆ ಓದಿ ಹೇಳಿದ ಸ್ವತ್ತುಗಳು 10 ನೇ ಪ್ರತಿವಾದಿಗೆ ಕೊಡಲಾಗಿದೆ ಎಂದರೆ ಸರಿ. ನಿಡಿ–1 ರ ದಾಖಲೆಯ ಷೆಡ್ಯೂಲ್ 4 ರಲ್ಲಿ ತೋರಿಸಿರುವ ಮತ್ತು ಈಗ ನೀವು ನನಗೆ ಓದಿ ಹೇಳಿದ ಸ್ವತ್ತುಗಳು 1 ನೇ ಪ್ರತಿವಾದಿಯ ತಂದೆ ನಂಝ್ಯಪ್ಪನಿಗೆ ಕೊಡಲಾಗಿದೆ ಎಂದರೆ ಸರಿ. ನಿಡಿ–1 ರ ದಾಖಲೆಯ ಷೆಡ್ಯೂಲ್ 5 ರಲ್ಲಿ ತೋರಿಸಿರುವ ಮತ್ತು ಈಗ ನೀವು ನನಗೆ ಓದಿ ಹೇಳಿದ ಸ್ವತ್ತುಗಳು ನನಗೆ ಮತ್ತು ನನ್ನ ತಾಯಿಗೆ ಕೊಡಲಾಗಿದೆ ಎಂದರೆ ಸರಿ. ನಿಡಿ–1 ರ ದಾಖಲೆಯ ಷೆಡ್ಯೂಲ್ 6 ರಲ್ಲಿ ತೋರಿಸಿರುವ ಮತ್ತು ಈಗ ನೀವು ನನಗೆ ಓದಿ ಹೇಳಿದ ಸ್ವತ್ತುಗಳು ನನ್ನ ಅಕ್ಕ 2 ನೇ ವಾದಿಗೆ ಕೊಡಲಾಗಿದೆ ಎಂದರೆ ಸರಿ.

13. ನನ್ನ ದೊಡ್ಡಮ್ಮ ನಾಗಮ್ಮನ ಪಾಲಿಗೆ ನಿಡಿ–1 ರ ಪಾಲು ವಿಭಾಗದ ಷೆಡ್ಯೂಲ್ 1 ರಲ್ಲಿ ತೊರಿಸಲಾಗಿರುವ ಸ್ವತ್ತುಗಳು ಆಕೆಯ ಮರಣದ ನಂತರ 1 ನೇ ಪ್ರತಿವಾದಿಯ ತಂದೆ ನಂಝ್ಯಪ್ಪ ಮತ್ತು 8 ನೇ ಪ್ರತಿವಾದಿಗೆ ಜಂಟಿಯಾಗಿ ಸೇರತಕ್ಕದು ಎಂದು ಬರೆಯಾಲಗಿದೆ

ಎಂದರೆ ಸಾಕ್ಷಿ ಸದರಿ ಬರವಣಿಗಯನ್ನು ನಿಡಿ-1 ರ ದಾಖಲೆಯ ಕೊನೆಯಲ್ಲಿ ಬೇರೆ ಕೈ ಬರವಣಿಗೆಯಲ್ಲಿ ಸೇರಿಸಲಾಗಿದೆ ಮತ್ತು ಸೃಷ್ಟಿಮಾಡಲಾಗಿದೆ ಎನ್ನುತ್ತಾರೆ.

14. ನಿಡಿ-1 ರ ದಾಖಲೆಯ ಒಟ್ಟು 6 ಪ್ರತಿಗಳನ್ನು ನೊಂದಣಿ ಮಾಡಿಸಲಾಗಿದೆ ಎಂದರೆ ಸರಿ. ಆ ಪೈಕಿ ನನ್ನ ಬಳಿಯೂ ಒಂದು ಪ್ರತಿ ಇದೆ ಎಂದರೆ ಸರಿ. ಸದರಿ ದಾಖಲೆ ಈಗ ಎಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿ ಬ್ಯಾಂಕಿನಲ್ಲಿದೆ ಎನ್ನುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ ಎಂದರೆ ಸರಿ. ನಿಮ್ಮ ಬಳಿ ಇರುವ ಪ್ರತಿಯಲ್ಲಿ ನಿಡಿ-1 ರಲ್ಲಿ ಬರೆದಿರುವಂತೆ ನಾಗಮ್ಮನ ಮರಣದ ನಂತರ ಆಕೆಯ ಆಸ್ತಿ ಯಾರಿಗೆ ಸೇರಬೇಕೆಂಬ ವಿವರವನ್ನು ಬರೆದಿದೆಯೋ ಇಲ್ಲವೊ ಎಂಬ ಪ್ರಶ್ನೆಗೆ ಸಾಕ್ಷಿ ಬರೆದಿದೆ ಎನ್ನುತ್ತಾರೆ. ಪಾಲು ವಿಭಾಗದ ಪ್ರತಿಯನ್ನು ನಾನು 2011 ರಲ್ಲಿ ಕೊಟ್ಟಿದ್ದೇನೆ. ನಿಡಿ-1 ರ ಪಾಲು ವಿಭಾಗದಲ್ಲಿ ನನ್ನ ಪಾಲಿಗೆ ಬಂದ ಆಸ್ತಿಗಳ ಮೇಲೆ ಮಾತ್ರ ನಾನು ಸಾಲ ಪಡೆದಿದ್ದೇನೆ.

15. ನಿಡಿ-1 ರ ಪಾಲು ವಿಭಾಗದಲ್ಲಿ ದಾವಾ ಐಟಂ ನಂಬರ್ 1 ರ ಸ್ವತ್ತನ್ನು ಸೇರಿಸಿರಲಿಲ್ಲ ಎಂದು ನನ್ನ ವಾದ ಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ಪಾಲು ವಿಭಾಗ ಪತ್ರವನ್ನು ನಾನು ನೋಡಿಲ್ಲ ಎನ್ನುತ್ತಾರೆ.

16. ನಿಡಿ-1 ರ ಪಾಲು ವಿಭಾಗ ನೊಂದಣಿ ಆದಾಗ ನನ್ನ ತಂದೆ ಮೃತಪಟ್ಟಿದ್ದರು ಎಂದರೆ ಸರಿ. ನನ್ನ ತಂದೇ ತೀರಿಕೊಂಡಾಗ ನಾನು, ನನ್ನ ತಾಯಿ ಮತ್ತು 2 ನೇ ವಾದಿ

ಒಡೆಯಪುರದಲ್ಲೇ ವಾಸವಿದ್ದೆವು. ನಿಡಿ-1 ರ ಪಾಲು ವಿಭಾಗ ಪತ್ರ ನೊಂದಣಿಯಾದ 2 ತಿಂಗಳ ನಂತರ ಸದರಿ ಪತ್ರದಂತೆ ನನ್ನ ಪಾಲಿಗೆ ಬಂದ ಆಸ್ತಿಗಳ ಪಹಣಿ ನನ್ನ ಹೆಸರಿಗೆ ಬದಲಾವಣೆ ಆಯಿತು. ಪಾಲು ವಿಭಾಗದಲ್ಲಿ ಉಳಿದವರಿಗೆ ಕೊಟ್ಟ ಆಸ್ತಿಗಳ ಪಹಣಿಗಳು ಸಹ ಅವರ ಅವರ ಹೆಸರಿಗೆ ಬದಲಾವಣೆ ಆಯಿತು ಎಂದರೆ ಸರಿ. ನನ್ನ ಪಾಲಿಗೆ ಬಂದ ಆಸ್ತಿಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ.

17. ನಿಡಿ-1 ರ ಪಾಲು ವಿಭಾಗ ಆದ ಬಗ್ಗೆ ಮತ್ತು ಅದರಲ್ಲಿ ನನಗೆ ಎಷ್ಟು ಆಸ್ತಿ ಬಂದಿದೆ ಎಂಬ ಬಗ್ಗೆ ನನಗೆ ಸದರಿ ಪಾಲು ವಿಭಾಗ ನೊಂದಣಿಯಾದ ದಿನವೇ ಗೊತ್ತಾಗಿದೆ ಎಂದರೆ ಸಾಕ್ಷಿ ನೊಂದಣಿಯಾದ 30-40 ದಿನಗಳ ನಂತರ ಗೊತ್ತಾಗಿದೆ ಎನ್ನುತ್ತಾರೆ. ನಿಡಿ-1 ರ ಪಾಲು ವಿಭಾಗ ದಾಖಲೆಯನ್ನು ನೋಡಿ ನನಗೆ ಬ್ಯಾಂಕಿನವರು ಸಾಲ ಕೊಟ್ಟಿದ್ದಾರೆ ಎಂದರೆ ಸರಿ.

18. ನನ್ನ ದೊಡ್ಡಮ್ಮ ತೀರಿಕೊಂಡ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಆಕೆ 15 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನಾಗಮ್ಮ ತೀರಿಕೊಂಡ ನಂತರ ಆಕಗೆ ಪಾಲು ವಿಭಾಗದಲ್ಲಿ ಬಂದ ಆಸ್ತಿ ನಮಗೆ ಸೇರಬೇಕು ಮತ್ತು ಅದರ ಪಹಣಿಯನ್ನು ನಮ್ಮ ಹೆಸರಿಗೆ ಮಾಡುವಂತೆ ನಾನು ಅರ್ಜಿ ಕೊಟ್ಟಿಲ್ಲ. ನಾಗಮ್ಮ ಯಾವಾಗ ತೀರಿಕೊಂಡರು ಎಂಬ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ನಾಗಮ್ಮನ ಮರಣವಾದ ಎಷ್ಟು ವರ್ಷಗಳ ನಂತರ ಆಕೆಯ ಪಾಲಿನ ಜಮೀನಿನ ಪಹಣಿ 1 ಮತ್ತು 8 ನೇ ಪ್ರತಿವಾದಿಯ ಹೆಸರಿಗೆ

ಬದಲಾವಣೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ನಾಗಮ್ಮನ ಪಾಲಿಗೆ ಕೊಟ್ಟಿದ್ದ ಸದರಿ ದಾವಾ ಐಟಂ ನಂಬರ್ 1 ರ ಆಸ್ತಿಯಲ್ಲಿ ಈಗ 1 ಮತ್ತು 8 ನೇ ಪ್ರತಿವಾದಿಯರೇ ಸ್ವಾಧೀನದಲ್ಲಿದ್ದಾರೆ. ಸದರಿ ಜಮೀನಿನ ಪೈಕಿ 1 ಎಕರೆಯಲ್ಲಿ 8 ನೇ ಪ್ರತಿವಾದಿ ಅಡಿಕೆ ತೋಟ ಮಾಡಿದ್ದಾರೆ ಎಂದರೆ ಸರಿ. ಇನ್ನೊಂದು 1 ಎಕರೆ ಜಮೀನಿನಲ್ಲಿ 1 ನೇ ಪ್ರತಿವಾದಿ ಕಣ ಮಾಡಿಕೊಂಡಿದ್ದಾರೆ ಎಂದರೆ ಸರಿ.

19. ನಿಡಿ–1 ರ ದಾಖಲೆಯ ಪ್ರಕಾರ ದಾವಾ ಐಟಂ ನಂಬರ್ 1 ರ ಸ್ವತ್ತು ಮೊದಲು ನಾಗಮ್ಮನಿಗೆ ಬಂದಿದ್ದು ಆ ನಂತರ ಪಾಲು ವಿಭಾಗ ಪತ್ರದ ನಿಬಂಧನೆ ಪ್ರಕಾರವೇ ಸದರಿ ಸ್ವತ್ತು 1 ಮತ್ತು 8 ನೇ ಪ್ರತಿವಾದಿಗೆ ಬಂದಿದ್ದು, ಆ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಥವಾ ಪಾಲು ಇಲ್ಲ ಎಂದರೆ ಸರಿಯಲ್ಲ.

20. ನಮ್ಮ ಊರಿನಲ್ಲಿ ಒಂದೇ ಜನಾಂಗದ 100 ಕುಟುಂಬ ಇದೆ ಎಂದರೆ ಸರಿ. ನಮ್ಮ ಊರಿನವರೆಲ್ಲಾರು ನನಗೆ ಪರಿಚಯವಿದ್ದಾರೆ ಎಂದರೆ ಸರಿ. ನಾನು ಹುಟ್ಟಿದಾಗಿನಿಂದ ಸದರಿ ಊರಿನಲ್ಲಿ ವಾಸವಿದ್ದೇನೆ. ನಾಗಮ್ಮ ತೀರಿಕೊಂಡ ನಂತರ ಆಕೆಯ ಪಾಲಿನ ಜಮೀನು ತನ್ನಗೊಬ್ಬನಿಗೆ ಸೇರಬೇಕೆಂದು 8 ನೇ ಪ್ರತಿವಾದಿ ತಹಶೀಲ್ದಾರ್ ರವರ ಮುಂದೆ 1 ನೇ ಪ್ರತಿವಾದಿಯ ತಂದೆಯ ವಿರುದ್ಧ ಆರ್.ಆರ್.ಡಿ.ಎಸ್ 22/2005–06 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ವಜಾ ಮಾಡಿದ ತಹಶೀಲ್ದಾರ್ ರವರು ನಿಡಿ–1 ರ ಪಾಲು ವಿಭಾಗದ ಪ್ರಕಾರ ನಾಗಮ್ಮನ ಆಸ್ತಿಯ ಪಾಲುಗಳನ್ನು 1 ಮತ್ತು 8 ನೇ

ಪ್ರತಿವಾದಿಯರ ಜಂಟಿ ಹೆಸರಿಗೆ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಆದೇಶದಂತೆ 1 ನೇ ಪ್ರತಿವಾದಿಯ ತಂದೆ ಮತ್ತು 8 ನೇ ಪ್ರತಿವಾದಿಯ ಜಂಟಿ ಹೆಸರಿಗೆ ಪಹಣಿ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**